(ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಗೆ ದಿನಾಂಕ: 29.03.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಕೆ.ಎನ್.ಎಸ್., 21 ರಿಂದ 25ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು 3ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ತಯಾರಿಸಲಾಗಿರುತ್ತದೆ. ನನ್ನ ಪ್ರಮಾಣ ಪತ್ರಕ್ಕೆ ಒಕ್ಕಣೆಯನ್ನು ನಾನೇ ನೀಡಿರುತ್ತೇನೆ. ನನ್ನ ಜೊತೆ ಆ ಸಮಯದಲ್ಲಿ ನವೀನ್ ಕುಮಾರ್ ರವರು ಇದ್ದರೇ ಎಂದರೆ ಇದ್ದರು ಎಂದು ನುಡಿಯುತ್ತೇನೆ. ನಾನು ಮತ್ತು ಸದರಿಯವರು ಸೇರಿ ಪ್ರಮಾಣ ಪತ್ರ ತಯಾರಿಸಲು ವಕೀಲರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಒಕ್ಕಣೆಯನ್ನು ನವೀನ್ ಕುಮಾರ್ ರವರು ನನಗೆ ಓದಿ ತಿಳಿಸಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ನವೀನ್ ಕುಮಾರ್ ರವರು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

5ನೇ ವಾದಿ ಈ ದಾವೆಯನ್ನು ಜಮೀನಿಗಾಗಿ ದಾಖಲಿಸಿರುತ್ತಾರೆ. ನನಗೆ 30-40 ವರ್ಷಗಳಿಂದ 5ನೇ ವಾದಿಯ ಪರಿಚಯವಿರುತ್ತದೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುತ್ತದೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. 5ನೇ ವಾದಿ ನನಗೆ ಎಲ್ಲಿ ಪರಿಚಯವಾಗಿರುತ್ತಾರೆ ಎಂದರೆ ಉಜ್ಜಿನಿ ಗ್ರಾಮದಲ್ಲಿ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತೇನೆ. ನನ್ನ ತಂದೆ ಮೂಲಕ ನನಗೆ 5ನೇ ವಾದಿ ಪರಿಚಯವಾಗಿರುತ್ತಾರೆ. ನನ್ನ ತಂದೆ 5ನೇ ವಾದಿ ಬೆಂಗಳೂರಿನಲ್ಲಿರುತ್ತಾರೆ ಎಂದು ಹೇಳಿ ನನಗೆ ಪರಿಚಯಿಸಿರುತ್ತಾರೆ ಎಂದರೆ ಸರಿ. 5ನೇ ವಾದಿ ತಮ್ಮ ಜೀವಿತಾವಧಿಯಲ್ಲಿ ಉಜ್ಜಿನಿಗೆ ಬಂದು ಹೋಗಿ ಮಾಡುತ್ತಿದ್ದರು. 5ನೇ ವಾದಿ ನಾನು ಚಿಕ್ಕವನಾಗಿದ್ದಾಗಲೇ ಬೆಂಗಳೂರಿಗೆ ಹೋಗಿರುತ್ತಾರೆ. 5ನೇ ವಾದಿಗೆ ಜಮೀನುಗಳ ವ್ಯವಹಾರಗಳ ಕುರಿತು ತಿಳುವಳಿಕೆ ಇತ್ತು. ನಾನು ಮತ್ತು 5ನೇ ವಾದಿ ಒಳ್ಳೆ ವಿಶ್ವಾಸದಲ್ಲಿ ಇದ್ದೆವು.

5ನೇ ವಾದಿ ಯಾವತ್ತೂ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸರಿ. 5ನೇ ವಾದಿಯ ತಾತನ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿಯವರ ಕುಟುಂಬದ ಮೂಲ ಪುರುಷನ ಹೆಸರು ನನಗೆ ತಿಳಿದಿರುವುದಿಲ್ಲ. ಸದರಿಯವರ ಕುಟುಂಬ ಸದ್ಯಸರ ಯಾರ ಹೆಸರೂ ನನಗೆ ಗೊತ್ತಿರುವುದಿಲ್ಲ. 5ನೇ ವಾದಿಯನ್ನು ಹೊರತುಪಡಿಸಿ ನನಗೆ ಸದರಿಯವರ ಕುಟುಂಬದಲ್ಲಿ ಬೇರೆ ಯಾರೂ ಗೊತ್ತಿರುವುದಿಲ್ಲ. 5ನೇ ವಾದಿಯನ್ನು ಹೊರತುಪಡಿಸಿ ನನಗೆ ಇತರೆ ವಾದಿಯರ ಪರಿಚಯವಿರುವುದಿಲ್ಲ. ಪ್ರಸ್ತುತ ದಾವೆಯ ವಾದಿ ಪ್ರತಿವಾದಿಗಳು ಯಾರೂ ಊರಿನಲ್ಲಿರುವುದಿಲ್ಲ ಎಂದರೆ ಸರಿ. ವಾದಿ-ಪ್ರತಿವಾದಿಯರು ಯಾವಾಗಿನಿಂದ ಬೆಂಗಳೂರಿನಲ್ಲಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ-ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ-ಪ್ರತಿವಾದಿಯರು ಒಟ್ಟಿಗೆ ವಾಸಿಸುತ್ತಿದ್ದಾರೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ಒಟ್ಟು

ಕುಟುಂಬದ ಸ್ವತ್ತುಗಳೇ ಎಂದರೆ ನನಗೆ ಗೊತ್ತಿರುವುದಿಲ್ಲ.

ದಿನಾಂಕಃ 13.04.1981 ಮತ್ತು 18.01.1992ರ ಕ್ರಯಪತ್ರಗಳ ಬಗ್ಗೆ ನನಗೆ ತಿಳಿದಿದೆಯೇ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತೇನೆ. ಬೇರೆಯವರ ಮೂಲಕವೂ ಸದರಿ ಕ್ರಯಪತ್ರಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಗಳು ಮಾರಾಟ ಆಗಿವೆಯೇ ಹಾಗೂ ಯಾರಿಗೆ ಮಾರಟವಾಗಿದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 5ನೇ ವಾದಿಯ ಕುಟುಂಬದಲ್ಲಿ ವಿಭಾಗ ಆಗಿದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ಬೇರೆಯವರ ಮೂಲಕವೂ ಸದರಿ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟಂಬದ ಸ್ವತ್ತುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿ ನನಗೆ ಇತರೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದರೆ ಸರಿ. ನವೀನ್ ಕುಮಾರ್ ರವರ ಸೂಚನೆಯಂತೆ ನಾನು ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಆಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ವಾದಿ ಕುಟುಂಬದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನವೀನ್ ಕುಮಾರ್ ರವರ ಸೂಚನೆಯಂತೆ ನನ್ನ ಮುಖ್ಯ ವಿಚಾರಣೆ ಪ್ರಮಾಣ

ಪತ್ರವನ್ನು ತಯಾರಿಸಿದ್ದರಿಂದ ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.